
ಗರಿಷ್ಠ ಪ್ರಮಾಣ 50% ಮಿತಿ ಹೆಚ್ಚಳದ ಬಗ್ಗೆ ರಾಜ್ಯಗಳ ಅಭಿಪ್ರಾಯ ಕೇಳಿದ ಸುಪ್ರೀಂ ಕೋರ್ಟ್

# ಮೀಸಲು ಏರಿಸಬಹುದೆ?

ಹೊಸದಿಲ್ಲಿ: ರಾಜ್ಯದಲ್ಲಿ ವಿವಿಧ ಸಮುದಾಯಗಳಿಂದ ಮೀಸಲು ಹೆಚ್ಚಳಕ್ಕೆ ಕೂಗು ಎದ್ದಿರುವ ಸಮಯದಲ್ಲೇ, ಗರಿಷ್ಠ ಮೀಸಲು ಪ್ರಮಾಣವನ್ನು ಈಗಿರುವ ಶೇ. 50ರ ಮಿತಿಗಿಂತಲೂ ಮೀರಿ ಹೆಚ್ಚಿಸಬಹುದೇ ಎಂಬ ಬಗ್ಗೆ ಅಭಿಪ್ರಾಯ ತಿಳಿಸುವಂತೆ ಎಲ್ಲಾ ರಾಜ್ಯ ಸರಕಾರಗಳನ್ನು ಸುಪ್ರೀಂ ಕೋರ್ಟ್ ಕೇಳಿದೆ.

ಮರಾಠ ಮೀಸಲಾತಿ ಸಿಂಧುತ್ವ ಪ್ರಶ್ನಿಸಿ ಸುಪ್ರೀಂಕೋರ್ಟ್‌ನಲ್ಲಿ ಸಲ್ಲಿಸಲಾಗಿರುವ



ಅರ್ಜಿಯ ವಿಚಾರಣೆ ವೇಳೆ, ನ್ಯಾ. ಅಶೋಕ್ ಭೂಷಣ್ ನೇತೃತ್ವದ ಪಂಚ ಸದಸ್ಯ ಪೀಠವು ಎಲ್ಲಾ ರಾಜ್ಯ ಸರಕಾರಗಳ ಅಭಿಪ್ರಾಯ ಕೇಳಿ ನೋಟಿಸ್ ಜಾರಿ ಮಾಡಿದೆ. ಈ ವಿಚಾರದಲ್ಲಿ ನ್ಯಾಯಾಲಯದ ತೀರ್ಪು ಎಲ್ಲಾ ರಾಜ್ಯಗಳ ಮೇಲೂ ಪರಿಣಾಮ ಬೀರುವ ಹಿನ್ನೆಲೆಯಲ್ಲಿ ಇತರ ರಾಜ್ಯಗಳ ಅಭಿಪ್ರಾಯವನ್ನೂ ಕೇಳಲಾಗಿದೆ.

ಅಲ್ಲದೆ, ಮೀಸಲಾತಿಗೆ ಅರ್ಹತೆ ಗಳಿಸಲು ನಿರ್ದಿಷ್ಟ ಸಮುದಾಯವನ್ನು ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದಿದೆ ಎಂದು ರಾಜ್ಯ ಸರಕಾರಗಳೇ ಘೋಷಿಸುವುದೇ, ಈ ಅಧಿಕಾರ ಶಾಸಕಾಂಗಗಳಿಗೆ ಇದೆಯೇ ಎಂಬ ಬಗ್ಗೆಯೂ ಕೋರ್ಟ್ ಪರಿಶೀಲನೆ ಮಾಡಲಿದೆ. ಈ ಬಗ್ಗೆಯೂ ಅಭಿಪ್ರಾಯ ತಿಳಿಸುವಂತೆ ನ್ಯಾಯಪೀಠ ಕೋರಿದೆ. ಮುಂದಿನ ವಿಚಾರಣೆಯನ್ನು ಮಾ.15ಕ್ಕೆ ನಿಗದಿಪಡಿಸಲಾಗಿದೆ.

ರಾಜ್ಯ ಸರಕಾರಗಳ ಅಭಿಪ್ರಾಯವನ್ನು ಆಧರಿಸಿ, ಸುಪ್ರೀಂ ಕೋರ್ಟ್ ಪಂಚ ಸದಸ್ಯ ಪೀಠವು ಮೀಸಲಾತಿ ಅರ್ಹತೆ ಪಡೆದ ಜಾತಿಗಳ ಪಟ್ಟಿಯನ್ನು ಒಳಗೊಂಡ ಸಂವಿಧಾನದ 102ನೇ ತಿದ್ದುಪಡಿಯನ್ನು ವ್ಯಾಖ್ಯಾನಿಸಲಿದೆ.




ಒಟ್ಟಾರೆ ಗರಿಷ್ಠ ಮೀಸಲು ಪ್ರಮಾಣ ಶೇ. 50ಕ್ಕಿಂತಲೂ ಮೀರಬಾರದೆಂದು 1992ರಲ್ಲಿ ಸುಪ್ರೀಂ ಕೋರ್ಟ್‌ನ 9 ಸದಸ್ಯರ ಪೀಠ ನೀಡಿದ್ದ ತೀರ್ಪಿನ ಮರುಪರಿಶೀಲನೆ ಬಗ್ಗೆಯೂ ವಿಚಾರಣೆ ನಡೆಸುವುದಾಗಿ ನ್ಯಾಯಪೀಠ ಹೇಳಿದೆ. 1992ರಲ್ಲಿ ಇಂದಿರಾ ಸಾಹ್ನಿ ಪ್ರಕರಣದಲ್ಲಿ ಮಹತ್ವದ ತೀರ್ಪು ನೀಡಿದ್ದ ಸುಪ್ರೀಂ ಕೋರ್ಟ್, ಎಲ್ಲಾ ಸಮುದಾಯಗಳಿಗೆ ನೀಡಲಾಗುವ ಒಟ್ಟಾರೆ ಮೀಸಲು ಪ್ರಮಾಣ ಗರಿಷ್ಠ ಶೇ. 50ಕ್ಕಿಂತಲೂ ಮೀರುವಂತಿಲ್ಲ ಎಂದು ಹೇಳಿತ್ತು. 'ಮಂಡಲ ತೀರ್ಪು' ಎಂದೇ ಹೆಸರಾದ ಈ ತೀರ್ಪು ನಂತರದ ಎಲ್ಲಾ ಮೀಸಲು ವಿವಾದಗಳಿಗೂ 'ಲಕ್ಷ್ಮಣ ರೇಖೆ'ಯಾಗಿದೆ.



2018ರ 'ಸಂವಿಧಾನದ 102ನೇ ತಿದ್ದುಪಡಿ ಕಾಯಿದೆ' ಪ್ರಕಾರ, ರಾಷ್ಟ್ರಪತಿಗಳು ಸಿದ್ಧಪಡಿಸಿದ ಪಟ್ಟಿಯಲ್ಲಿ ಉಲ್ಲೇಖಗೊಂಡ ನಿರ್ದಿಷ್ಟ ಸಮುದಾಯಕ್ಕೆ ಮಾತ್ರ ಮೀಸಲು ಸೌಲಭ್ಯ ನೀಡಲು ಅವಕಾಶವಿದೆ. 102ನೇ ತಿದ್ದುಪಡಿಯ ಮೂಲಕ ಸಂವಿಧಾನಕ್ಕೆ 338 'ಬಿ' ಮತ್ತು 342 'ಎ' ಎಂಬ ಎರಡು ವಿಧಿಗಳನ್ನು ಸೇರಿಸಲಾಯಿತು. ಈ ಪೈಕಿ 338 'ಬಿ' ವಿಧಿಯು ಹಿಂದುಳಿದ ವರ್ಗಗಳ ಆಯೋಗದ ರಚನೆ, ಕರ್ತವ್ಯ ಮತ್ತು ಅಧಿಕಾರಗಳ ಕುರಿತದ್ದಾದರೆ, 342 'ಎ' ವಿಧಿಯು ಯಾವುದೇ ಸಮುದಾಯವನ್ನು ಆರ್ಥಿಕ ಮತ್ತು ಸಾಮಾಜಿಕವಾಗಿ ಹಿಂದುಳಿದ ಜಾತಿ ಎಂದು ಘೋಷಿಸುವ ಅಧಿಕಾರವನ್ನು ಕೇವಲ ರಾಷ್ಟ್ರಪತಿಗಳಿಗೆ ಮಾತ್ರ ಸೀಮಿತಗೊಳಿಸುತ್ತದೆ. ಈ ಪಟ್ಟಿಗೆ ಜಾತಿಗಳು / ಸಮುದಾಯಗಳ ಸೇರ್ಪಡೆ ಅಧಿಕಾರವನ್ನು ರಾಷ್ಟ್ರಪತಿಗಳಿಗೆ ಈ ತಿದ್ದುಪಡಿಯು ನೀಡುತ್ತದೆ.



ಮರಾಠರನ್ನು ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ಸಮುದಾಯವೆಂದು ಘೋಷಿಸಿ, ಅವರಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ 16% ಮೀಸಲು ನೀಡಲು ರಾಜ್ಯ ಸರಕಾರ 2018ರಲ್ಲಿ ಹೊಸ ಕಾಯಿದೆಯನ್ನು ಜಾರಿಗೊಳಿಸಿತು. 2019ರಲ್ಲಿ ಬಾಂಬೆ ಹೈಕೋರ್ಟ್ ಈ ಕ್ರಮವನ್ನು ಎತ್ತಿ ಹಿಡಿದಿತ್ತಾದರೂ, ಶೇ. 16ರಷ್ಟು ಮೀಸಲು ಸಾಧ್ಯವಿಲ್ಲ. ಶಿಕ್ಷಣದಲ್ಲಿ 13% ಮತ್ತು ಉದ್ಯೋಗದಲ್ಲಿ 12% ಮಾತ್ರ ನೀಡಬಹುದೆಂದು ಹೇಳಿತ್ತು. ಅತ್ಯಂತ ವಿರಳ ಹಾಗೂ ವಿನಾಯಿತಿಯ ಪ್ರಕರಣಗಳನ್ನು ಹೊರತುಪಡಿಸಿ, ಬೇರೆ ಯಾವ ಕಾರಣಕ್ಕೂ ಸುಪ್ರೀಂ ಕೋರ್ಟ್ ತೀರ್ಪು ನಿಗದಿಪಡಿಸಿರುವ ಶೇ. 50ರ ಮೀಸಲು ಗರಿಷ್ಠ ಮಿತಿಯನ್ನು ಉಲ್ಲಂಘಿಸಲು ಸಾಧ್ಯವಿಲ್ಲ ಎಂದು ಹೈಕೋರ್ಟ್ ಹೇಳಿತ್ತು. ಈ ಮಧ್ಯೆ ಮರಾಠ ಮೀಸಲು ಕಾಯಿದೆ ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗಿದ್ದು, ಇದರ ವಿಚಾರಣೆಗೆ ಪಂಚ ಸದಸ್ಯ ಸಂವಿಧಾನ ಪೀಠ ರಚಿಸಲಾಗಿದೆ. ಈಗಾಗಲೇ ತಮಿಳುನಾಡು ಸಹ ಶೇ. 50ರ ಒಟ್ಟು ಮೀಸಲು ಲಕ್ಷ್ಮಣ ರೇಖೆ ದಾಟಿ ಮೀಸಲು ಸೌಲಭ್ಯ ಕಲ್ಪಿಸಿದೆ. ಈ ಹಿನ್ನೆಲೆಯಲ್ಲಿ ಒಟ್ಟು ಮೀಸಲು ಪ್ರಮಾಣ 50% ಮೀರಬಹುದೇ ಮತ್ತು ನಿರ್ದಿಷ್ಟ ಜಾತಿ ಅಥವಾ ಸಮುದಾಯವನ್ನು ಹಿಂದುಳಿದ ವರ್ಗವೆಂದು ಪರಿಗಣಿಸುವ ಅಧಿಕಾರ ರಾಜ್ಯಗಳಿಗೆ ಇದೆಯೇ ಎಂಬುದನ್ನು ಸುಪ್ರೀಂ ಕೋರ್ಟ್ ತೀರ್ಮಾನಿಸಲಿದೆ.